ವಲಯವಾಗಿದೆ. ಇದನ್ನು ಮಾಡಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಏನು ಬದಲಾವಣೆ ಮಾಡಬೇಕೆಂದು ಇದ್ದೀರೊ ಅದನ್ನು ಆದಷ್ಟು ಬೇಗನೆ ಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ:– ಮಾಡಿಕೊಡುತ್ತೇವೆ.

ಶ್ರೀ ಆರ್. ರೋಷನ್‌ಬೇಗ್:– ಕೂಲಿ ಕಾರ್ಮಿಕರನ್ನು ಸೇರಿಸಿಕೊಳ್ಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:– ಕೂಲಿ ಕಾರ್ಮಿಕರು ಅದರಲ್ಲಿ ಬರುತ್ತಾರೆ. ತಾವು 75 ಕ್ಯಾಟಗರಿ ಬಗ್ಗೆ ಹೇಳಿದ್ದೀರಿ. ಅದರಲ್ಲಿ ಈ ಎಲ್ಲಾ ವರ್ಗದವರು ಬರುತ್ತಾರೆ.

ಅಧ್ಯಕ್ಷರು:– ಅವರು ಮಾಡುತ್ತಾರೆ ಬಿಡಿ.

ಶ್ರೀ ಮಾಲಿಕಯ್ಯ ವೆಂಕಯ್ಯ ಗುತ್ತೇದಾರ್:– ಅವರಿಗೆ 50 ವರ್ಷಗಳಾದ ಮೇಲೆ ಮಾಸಾಶನ ನೀಡುವುದರ ಬಗ್ಗೆ ಹೇಳಬೇಕು.

ಅಧ್ಯಕ್ಷರು:– ಇದಕ್ಕೆ ಸಂಬಂಧಪಟ್ಟಂತೆ ಮಾಡುವ ಗೈಡ್‌ಲೈನ್ಸ್‌ನಲ್ಲಿ ಇದೆಲ್ಲಾ ಬರುತ್ತದೆ. ಒಂದು ಸಲ ಫಾರ್ಮೆಟ್ ಆದರೆ ಅದೆಲ್ಲಾ ಮುಗಿದು ಹೋಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:– ಇದಕ್ಕೆ ಸಂಬಂಧಪಟ್ಟಂಥ ಬಿಲ್ ಬಂದ ಮೇಲೆ ನಾವು ರೂಲ್ಸ್ ಫ್ರೇಮ್ ಮಾಡಿ ಅದನ್ನು ಮಾಡಿ ಕೊಡುತ್ತೇವೆ.

ಅಧ್ಯಕ್ಷರು:– ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಬೀದರ್ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯೋಜನೆಗಳನ್ನು ಅನುಷ್ಠಾನ ಮಾಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**116 (526)**
ಸದಸ್ಯರ ಹೆಸರು	:	**ಶ್ರೀ. ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)**
ಉತ್ತರಿಸುವ ಸಚಿವರು	:	**ಶ್ರೀ ಬಿ. ಶ್ರೀರಾಮಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯಾವ ಯಾವ ಯೋಜನೆಗಳನ್ನು ಅನುಷ್ಠಾನ ಮಾಡುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿವೆ (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸ ಯೋಜನೆಗಳನ್ನು ಪ್ರಸ್ತಾಪಿಸಿರುವುದಿಲ್ಲ.

ಆ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ಹಣವೆಷ್ಟು?

ಉದ್ಭವಿಸುವುದಿಲ್ಲ.

ಇ) ಈ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಸರ್ಕಾರವು ಮಂಜೂರಾತಿ ನೀಡಿದೆ:

ಉದ್ಭವಿಸುವುದಿಲ್ಲ.

ಈ) ಈಗ ಜಾರಿಯಲ್ಲಿರುವ ಯೋಜನೆಗಳು ಯಾವುವು ಹಾಗೂ ಯಾವ ಹಂತದಲ್ಲಿವೆ?

ಈ ಎಲ್ಲಾ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದ್ದು ಪ್ರಗತಿಯಲ್ಲಿವೆ.

ರೂ.ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಯೋಜನೆಗಳು	ನಿಗಧಿ ಪಡಿಸಿರುವ ಅನುದಾನ
1	ನಗರ ಆರೋಗ್ಯ ಸೇವೆಗಳು	23.31
2	ಆರೋಗ್ಯ ಇಲಾಖೆಯ ಕಟ್ಟಡಗಳ ನಿರ್ವಾಹಣೆ	10.13
3	ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳು	10.13
4	ಆರ್.ಐ.ಡಿ.ಎಫ್. ಕಾಮಗಾರಿಗಳು	38.51
5	ಆಂಬ್ಯುಲೆನ್ಸ ಗಳ ವ್ಯವಸ್ಥೆ	10.13
6	ರಕ್ತ ನಿಧಿ ಸ್ಥಾಪನೆ	10.13
7	ತಾಲ್ಲೂಖಿ ಆಸ್ಪತ್ರೆಗಳಿಗೆ ಕ್ಷ-ಕಿರಣ ಸೌಲಭ್ಯಗಳು.	8.11
8	ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆ.	73.97
9	ಆಸ್ಪತ್ರೆಯ ಸಲಕರಣೆಗಳ ದುರಸ್ತಿ	5.07
10	ರಾಷ್ಟ್ರೀಯಾ ಮಲೇರಿಯಾ ನಿರೋಧ ಕಾರ್ಯಕ್ರಮ (ಗ್ರಾಮೀಣ)	303.99
11	ಮಾನಸಿಕ ಆರೋಗ್ಯ ಯೋಜನೆ (ಎನ್.ಎಂ.ಇ.ಪಿ)	0.13
12	ರೋಗಗಳ ನಿವಾರಣೆ ಮತ್ತು ನಿಯಂತ್ರಣ	10.13
13	ಜಿಲ್ಲಾ ಆ.ಕು.ಶ ಕಛೇರಿ ಕಟ್ಟಡಗಳು	10.13
14	ಐ.ಸಿ.ಡಿ.ಎಸ್	0.51

15	ಶಾಲಾ ಆರೋಗ್ಯ ಸೇವೆಗಳು	2.03
16	ಸಾಮಾಗ್ರಿಗಳ ಸರಬರಾಜು	10.13
17	ಕುಷ್ಟ ರೋಗ ನಿಯಂತ್ರಣ ಯೋಜನೆ	2.50
18	ಕೇಂದ್ರ ಪುರಸ್ಕೃತ ರಾಷ್ಟ್ರೀಯ ಫೈಲೇರಿಯಾ ನಿಯಂತ್ರಣಾ ಕಾರ್ಯಕ್ರಮ	0.25
19	ಕೇಂದ್ರ ಪುರಸ್ಕೃತ ಗಿನಿಜಂತು ನಿರ್ಮೂಲನಾ ಯೋಜನೆ.	0.10
	ಒಟ್ಟು	**529.56**

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಬೀದರ್ ಜಿಲ್ಲೆಗೆ ಹೊಸ ಯೋಜನೆಗಳನ್ನು ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದಕ್ಕೆ ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸ ಯೋಜನೆಗಳನ್ನು ಪ್ರಸ್ತಾಪಿಸಿರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ, ಕೆಲವು ಅಂಶಗಳನ್ನು ಇದರಲ್ಲಿ, ಕಾರ್ಯರೂಪಕ್ಕೆ ತರುತ್ತೇವೆಂದು ಕಳೆದ ಸಲ ಮಾನ್ಯ ಯಡಿಯೂರಪ್ಪನವರು ತಮ್ಮ ಬಜೆಟ್‌ನಲ್ಲಿ ಹೇಳಿದ್ದರು 2007–2008ನೇ ಸಾಲಿನಲ್ಲಿ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿ ಹಾಗೂ ಹಣಕಾಸಿನ ಸಚಿವರಾಗಿದ್ದಾಗ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂಬುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

"During 2006-07 our Government introduced telemedicine at all our district hospitals. National health programmes like malaria programme, programme for prevention and control of blindness, tuberculosis control programme are being implemented as contemplated and our share will be fully provided. In 2007-08 budget, Government of India has announced the introduction of a new scheme called" Aam Admi Bima Yojana" and we will explore the possibility of linking our "Suvarana Suraksha" scheme with this. for implementing Suvarna Suraksha I propose to allocate Rs. 35 crore in 2007-08". ಇದನ್ನು ಲಿಂಕ್ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅದನ್ನು ಸುವರ್ಣ ಸುರಕ್ಷ ಯೋಜನೆಯಲ್ಲಿ ಲಿಂಕ್ ಮಾಡಿದ್ದಾರೆಯೇ ಅಥವಾ ಇಲ್ಲವೇ? ಇನ್ನೊಂದು ಪ್ರಶ್ನೆ ಏನೆಂದರೆ, ಕಳೆದ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಿರುವ ಯೋಜನೆಗಳಾದ ಮಡಿಲು ಮತ್ತು ಪ್ರಸೂತಿ ಆರೈಕೆ, ಇವುಗಳ ಅನುಷ್ಠಾನಕ್ಕಾಗಿ

ಬೀದರ್ ಜಿಲ್ಲೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಮತ್ತೆ ಅದರಿಂದ ಎಷ್ಟು ಜನರಿಗೆ ಸೌಲಭ್ಯ ಸಿಕ್ಕಿದೆ ಎಂಬುದನ್ನು ಅಥವಾ ಈ ಯೋಜನೆಗಳನ್ನು ತೆಗೆದುಕೊಂಡಿದ್ದೀರಾ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗೆ ಅರ್ಥವಾಗಿಲ್ಲ. ಒಂದು ವೇಳೆ ಇನ್ನೂ ತೆಗೆದುಕೊಂಡಿಲ್ಲವೆಂದರೆ, ಯಾವಾಗ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಏಕೆಂದರೆ ಕಳೆದ ಸಲ ಈ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಆದರೆ ಇಲ್ಲಿಯವರೆಗೆ ಅನುಷ್ಠಾನವಾಗದಿದ್ದರೆ ಏಕೆ ಆಗಿಲ್ಲವೆಂದು ಹೇಳಬೇಕು.

ಶ್ರೀ ಬಿ. ಶ್ರೀರಾಮಲು:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಸದ್ಯಕ್ಕಂತೂ ಬೀದರ್ ಜಿಲ್ಲೆಯ ಆಸ್ಪತ್ರೆಯಿಂದ ಯಾವುದೇ ಹೊಸ ಯೋಜನೆಗಳಿಗೆ ಪ್ರಸ್ತಾವನೆಯನ್ನು ನೀಡಿಲ್ಲ. ಕಳೆದ ಸಾರಿ ಹಣಕಾಸಿನ ಸಚಿವರು ಮತ್ತು ಉಪ ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಯಡಿಯೂರಪ್ಪನವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಆದ್ದರಿಂದ, ಬೀದರ್ ಜಿಲ್ಲೆಯ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಏನೇನು ಬೇಕಾಗುತ್ತದೆಂಬುದರ ಬಗ್ಗೆ ಒಂದು ಪತ್ರದಲ್ಲಿ ಕೊಟ್ಟರೆ ತಕ್ಷಣ ಅದನ್ನು ಮಾಡಿಕೊಡುತ್ತೇನೆ.

ಅಧ್ಯಕ್ಷರು:– ಮಾನ್ಯ ಶ್ರೀರಾಮಲುರವರೆ, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಏನು ಕೇಳುತ್ತಿದ್ದಾರೆಂದರೆ, ಹಿಂದೆ ಉಪ ಮುಖ್ಯ ಮಂತ್ರಿಗಳು ಬಜೆಟ್‌ನಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೆಲವೊಂದು ಸ್ಕೀಂಗಳನ್ನು ಪ್ರಕಟಣೆ ಮಾಡಿದ್ದರು. ಆ ಯೋಜನೆಗಳು ನಮ್ಮ ಬೀದರ್ ಜಿಲ್ಲೆಗೆ ಅನ್ವಯವಾಗುತ್ತದೆಯೇ ಅಥವಾ ಇಲ್ಲವೇ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಬಿ. ಶ್ರೀರಾಮಲು:– ಆ ಯೋಜನೆಗಳು ಇನ್ನೂ ಜಾರಿಗೆ ಬಂದಿಲ್ಲ. ಇನ್ನು ಮುಂದೆ ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಇದು ನಮ್ಮ ಜಿಲ್ಲೆಗೆ ಅನ್ವಯವಾಗುತ್ತದೆಯೇ?

ಶ್ರೀ ಬಿ. ಶ್ರೀರಾಮಲು :– ಖಂಡಿತ ಬೀದರ್ ಜಿಲ್ಲೆಗೂ ಕೂಡ ಅನ್ವಯವಾಗುತ್ತದೆ.

ಅಧ್ಯಕ್ಷರು:– ಇಡೀ ರಾಜ್ಯಕ್ಕೆ ಅನ್ವಯವಾಗುವಂಥ ಸ್ಕೀಂ ಇದಾಗಿದೆ. ಆದ್ದರಿಂಥ ಬೀದರ್ ಜಿಲ್ಲೆಗೆ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದು ಅವರ ಪ್ರಶ್ನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಈ ಸಾರಿ ಪ್ರಾರಂಭ ಮಾಡುತ್ತೀರಾ?

ಶ್ರೀ ಬಿ. ಶ್ರೀರಾಮಲು:– ನಾನು ಹೊಸದಾಗಿ ಖಾತೆಯನ್ನು ವಹಿಸಿಕೊಂಡಿದ್ದೇನೆ. ಎಲ್ಲಾ ಕಡೆ ಇದನ್ನು ಜಾರಿ ಮಾಡುತ್ತೇವೆ.

ಅಧ್ಯಕ್ಷರು:– ಇದು ರಾಜ್ಯದ ಎಲ್ಲಾ ಕಡೆ ಜಾರಿ ಮಾಡಬೇಕಾಗುತ್ತದೆ. ಆದ್ದರಿಂದ, ಅಲ್ಲಿಗೂ ಕೂಡ ಜಾರಿ ಮಾಡುತ್ತೀರಲ್ಲವೆ?

ಶ್ರೀ ಬಿ. ಶ್ರೀರಾಮಲು :– ಖಂಡಿತ ಬೀದರ್ ಜಿಲ್ಲೆಗೂ ಜಾರಿ ಮಾಡುತ್ತೇವೆ.

ರಾಜ್ಯದಲ್ಲಿ ಚಿಕುಂಗುನ್ಯ ಖಾಯಿಲೆಯಿಂದ ಆಸ್ಪತ್ರೆಗೆ ದಾಖಲಾಗಿರುವವರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 117 (277)
ಸದಸ್ಯರ ಹೆಸರು : ಶ್ರೀ. ರೋಷನ್ ಬೇಗ್. ಆರ್. (ಶಿವಾಜಿನಗರ)
ಉತ್ತರಿಸುವ ಸಚಿವರು : ಶ್ರೀ ಬಿ. ಶ್ರೀರಾಮಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿ ಚಿಕುಂಗುನ್ಯ ಖಾಯಿಲೆಯಿಂದ ಆಸ್ಪತ್ರೆಗೆ ದಾಖಲಾಗಿರುವವರ ಸಂಖ್ಯೆ ಯೆಷ್ಟು?

ರಾಜ್ಯದಲ್ಲಿ ಚಿಕುಂಗುನ್ಯ ರೋಗವು 23 ಜಿಲ್ಲೆಗಳಲ್ಲಿ ವರದಿಯಾಗಿದ್ದು ಇದುವರೆಗೆ ಶಂಕಿತ ಚಿಕುಂಗುನ್ಯ ರೋಗದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದವರ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:

ಜಿಲ್ಲೆ	ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದವರ ಸಂಖ್ಯೆ
ದಕ್ಷಿಣ ಕನ್ನಡ	2991
ಉಡುಪಿ	242
ಧಾರವಾಡ	73
ಶಿವಮೊಗ್ಗ	11
ಬೆಳಗಾಂ	4
ಬೆಂಗಳೂರು ನಗರದ ವಿವಿದ ಆಸ್ಪತ್ರೆಗಳು	24
ಉಳಿದ ಜಿಲ್ಲೆಗಳಲ್ಲಿ ಶಂಕಿತ ಚಿಕುಂಗುನ್ಯ ರೋಗಿಗಳು ಹೊರರೋಗಿಗಳಾಗಿ ಚಿಕಿತ್ಸೆ ಪಡಿದಿರುತ್ತಾರೆ.	